ಮಿನಿಕಥೆ




# ಕತ್ತಲೆ

ಈ ಹುಡುಗ ಅನ್ನ ಕದಿಯಲು ಬಂದವನೋ ಅಥವಾ ಬುಡಮೇಲು ಕೃತ್ಯ ನಡೆಸುವವರ ಪಿತೂರಿಯಿಂದಾಗಿ ಅನ್ನಕ್ಕೆ ವಿಷ ಸೇರಿಸಲು ಬಂದವನೋ..?

★ ಮಂಜುನಾಥ ನಾಯ್ಕ್

ಈ ಹುಡುಗ ಅನ್ನದ ತಪ್ಪಲೆಗೆ ಯಾಕೆ ಕೈ ಹಾಕಿರಬಹುದು? ಅದು ಕಳ್ಳತನವೇ ಅಥವಾ ಹುನ್ನಾರವೇ..? ಕಾರ್ಯಕ್ರಮದಲ್ಲಿ ಮಂತ್ರಿ ಮಹೋದಯರು ಭಾಗವಹಿಸಿ ಊಟ ಮಾಡುವವರಿದ್ದರು.

ಈ ಹುಡುಗ ಅನ್ನ ಕದಿಯಲು ಬಂದವನೋ ಅಥವಾ ಬುಡಮೇಲು ಕೃತ್ಯ ನಡೆಸುವವರ ಪಿತೂರಿಯಿಂದಾಗಿ ಅನ್ನಕ್ಕೆ ವಿಷ ಸೇರಿಸಲು ಬಂದವನೋ..? ಅವನನ್ನು ಹಿಡಿದ ತಕ್ಷಣವೇ ಜೇಬನ್ನು ತಡಕಾಡಬೇಕಿತ್ತು. ಅದನ್ನೂ ಮಾಡಿದ್ದಾರಂತೆ, ಆದರೆ ಜೇಬು ತುಂಬಾ ಸಿಕ್ಕಿದ್ದು ಬರೀ ಅನ್ನವಂತೆ.

ಆ ಅನ್ನದಲ್ಲಿಯೇ ಆತ ಆಚೆಯಿಂದಲೇ ವಿಷ ಬೆರೆಸಿ ತಂದಿರಬಾರದೇಕೆ..? ಅದನ್ನು ರಾಶಿಗೆ ಬೆರೆಸುವಾಗ ಸಿಕ್ಕಿಹಾಕಿಕೊಂಡಿರಬಹುದು. ಇದು ಗಣ್ಯಾತಿಗಣ್ಯರ ಹತ್ಯೆಯ ಪ್ರಯತ್ನವೇ ವಿನಃ ಅನ್ನದ ಕಳ್ಳತನ ಖಂಡಿತಾ ಅಲ್ಲ. ಇಷ್ಟೊಂದು ಸುಭಿಕ್ಷವಾದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ, ಒಂದು ರೂಪಾಯಿಗೆ ಕೆ.ಜಿ ಅಕ್ಕಿ ಸಿಕ್ಕುತ್ತಿರುವಾಗ ಅನ್ನ ಕದಿಯುವ ದಾರಿದ್ರ್ಯವೆ? ಖಂಡಿತಾ ಇದು ಅಸಾಧ್ಯದ ಮಾತು..!

ತರಹೇವಾರು ಸಲಹೆಗಳು ಮಾತುಗಳು. ಮಾಧ್ಯಮಗಳಲ್ಲೂ ಬಿಸಿ ಬಿಸಿ ಚರ್ಚೆಗಳು.

* * * *

ಹುಡುಗ ಚಿಕ್ಕ ವಯಸ್ಸಿನವನು. ದೊಡ್ಡ ಮಟ್ಟದ ಶಿಕ್ಷೆ ಕೊಡಲು ಅವನು ವಯಸ್ಕನಲ್ಲ, ಬಾಲಾಪರಾಧಿ. ಹಾಗೆಂದು ಪದ ಬಳಸುವಂತೆಯೂ ಇಲ್ಲ; ಕಾನೂನಿನ ವಿರುದ್ಧ ಸಂಘರ್ಷಕ್ಕೆ ಸಿಲುಕಿದವನು. ಆದರೆ ಒಂದು ಸಂಶಯ– ಅವನ ಉದ್ದೇಶ ಹಸಿವೆಯ..? ಎಂಬುದು. ಬಾಲಸಹಜ ಆಸ್ಥೆಯಿಂದ ಅವನು ಜಿಲೇಬಿ, ಮೈಸೂರು ಪಾಕಿನಂತಹ ಸಿಹಿತಿಂಡಿ ಎದುರಿಗೇ ಇದ್ದರೂ ಅದೊಂದಕ್ಕೂ ಕೈ ಹಾಕದೇ ಅನ್ನದ ರಾಶಿಗೇ ಕೈ ಹಾಕಬೇಕೆಂದರೆ..!

ಮಕ್ಕಳು ಸಹಜವಾಗಿ ಸಿಹಿತಿಂಡಿಗೇ ಕೈ ಚಾಚುತ್ತಾರೆ. ಎದುರಿಗೆ ಅನ್ನದ ರಾಶಿ ಮತ್ತು ಸಿಹಿ ತಿಂಡಿ ಇಟ್ಟರೇ ಸಿಹಿ ತಿಂಡಿಗೆ ಕೈ ಚಾಚುವ ಸಾಧ್ಯತೆ ಶೇಕಡಾ 98 ರಷ್ಟು ಹೆಚ್ಚು. ಹಾಗಾಗಿ ಇಲ್ಲಿ ಉದ್ದೇಶ ಅನ್ನದ ಕಳುವಿಗಿಂತ ಬೇರೆಯಾಗಿಯೇ ಆಗಿ ಕಾಣಿಸುತ್ತಿದೆ– ಎನ್ನುವುದು ಮನಃಶಾಸ್ತ್ರಜ್ಞರ ಅಭಿಮತ.

ಕಾನೂನು ತಜ್ಞರದ್ದೂ ಅದೇ ನಿಲುವು. ಹೌದು, ದೊಡ್ಡ ಮಟ್ಟದ ವಿಚಾರಣೆಯೇ ಆಗಬೇಕು. ಬುಡಮೇಲು ಕೃತ್ಯ ಎಸಗುವವರು ಶಿಕ್ಷೆಯ ಪ್ರಮಾಣ ಕಡಿಮೆ ಎಂಬ ಕಾರಣಕ್ಕೆ ಮಕ್ಕಳನ್ನು ದಾಳವಾಗಿ ಉಪಯೋಗಿಸಿ ಕೊಳ್ಳುವ ಸಾಧ್ಯತೆಗೆ ಅವಕಾಶವಾಗಬಾರದು. ಈ ನಿಟ್ಟಿನಲ್ಲಿ ಕಾನೂನಿನ ತಿದ್ದುಪಡಿಯ ಬಗ್ಗೆ ಯೋಚನೆ ನಡೆಸಿದರೂ ತಪ್ಪಿಲ್ಲ. ಹುಡುಗ ಕೃತ್ಯವೆಸಗಿದ ಸಮಾರಂಭದಲ್ಲಿ ಉನ್ನತ ಮಟ್ಟದ ನಾಯಕರು ಭಾಗವಹಿಸುವ ಸಾಧ್ಯತೆ ಇದ್ದುದರಿಂದ ಉಪೇಕ್ಷೆ ಖಂಡಿತಾ ಸಲ್ಲದು..! ಹುಡುಗನನ್ನು ಹಣದ ಆಸೆ ತೋರಿಸಿ ಬೇರೆ ಯಾರಾದರೋ ವಿದ್ರೋಹಿಗಳು ಬಳಸಿಕೊಂಡಿರುವ ಸಾಧ್ಯತೆಯೇ ಹೆಚ್ಚು.

ಅತ್ತ ಸ್ಟೇಶನ್ನಿನಲ್ಲಿ ಇನ್ಸ್‌ಪೆಕ್ಟರ್ ಹುಡುಗನ ವಿಚಾರಣೆ ನಡೆಸಿದ್ದರು. ಮಂತ್ರಿ ಮಹೋದಯರ ಊಟಕ್ಕೆ ಸರಿಯಾದ ಕಾವಲು ಕೊಡಲಾಗದ ಬಗ್ಗೆ ಉನ್ನತ ಅಧಿಕಾರಿಗಳಿಂದ ಛೀಮಾರಿ ಹಾಕಿಸಿಕೊಂಡಿದ್ದು ಅವರ ಸಮವಸ್ತ್ರದ ಮೇಲಿನ ಸ್ಟಾರ್ ಗೆ ಅವಮಾನ ಮಾಡಿದಂತಿತ್ತು. ಘಟನೆಯ ಕಾರಣವನ್ನು ಬಹಿರಂಗಗೊಳಿಸಿ ಅವಮಾನವನ್ನು ಕಡಿಮೆ ಮಾಡಿಕೊಳ್ಳುವ ಉದ್ದೇಶದಿಂದ ಕಣ್ಣುಗಳಲ್ಲಿ ಕ್ರೌರ್ಯ ತುಂಬಿ ವಿಚಾರಣೆ ನಡೆಸಿದ್ದರು. ಆದರೆ ಹುಡುಗ ಹೆಸರು ಕೂಡಾ ಹೇಳುತ್ತಿಲ್ಲ! ಅವನ ವಿಳಾಸವೂ ಗೊತ್ತಾಗುತ್ತಿಲ್ಲ. ಅನ್ನ ತುಂಬಿದ ತಟ್ಟೆಯನ್ನೇ ಹುಡುಗನ ಮುಂದಿಟ್ಟು, 'ತಿನ್ನೋ .... ಮಗನೆ, ನಿನಗೆ ಅನ್ನಬೇಕು ತಾನೆ..?' ಎಂದು ಗದರಿಸಿದರು. ಹಸಿವೆಯಿಂದ ಕಂಗೆಟ್ಟ ಹುಡುಗ ತಟ್ಟೆಗೆ ಕೈಚಾಚಿದ್ದ. ತಟ್ಟನೇ ಕೈ ಹಿಂದಕ್ಕೆ ಸರಿಯಿತು. ಇನ್ಸ್‌ಪೆಕ್ಟರ್ ಹುಡುಗನ ತಲೆಗೊಂದು ಮೊಟಕಿದ. ಕೆನ್ನೆಗೆರಡು ಬಾರಿಸಿದ.

ಹುಡುಗನ ಜೇಬಿನೊಳಗೆ ಅನ್ನವಿತ್ತು. ಜತೆಗೆ ಕಿಸೆಯಿಂದ ಯಾವುದೋ ಪುಡಿಯೂ ಅದರಲ್ಲಿ ಬೆರೆತಿತ್ತು. ವಾಸನೆ ನೋಡಿದರೆ ಇಲಿ ಪಾಷಾಣದಂತಿದೆ. ಏನೋ ಮಸಲತ್ತು ಇರಲೇಬೇಕು.

ರೇಜಿಗೆಯಿಂದ ಇನ್ಸ್‌ಪೆಕ್ಟರ್ ಮತ್ತೆರಡು ಬಾರಿಸಿದ. ಹುಡುಗ ಅಲ್ಲಾಡುತ್ತಿಲ್ಲ. ಅವುಡುಗಚ್ಚಿ ನೋವು ಸಹಿಸಿಕೊಳ್ಳುತ್ತಿದ್ದಾನೆ. ಒಂದು ಮಾತೂ ಇಲ್ಲ! ಇಲ್ಲ, ಇವನು ಬಾಯಿ ಬಿಡುವುದಿಲ್ಲ. ಇನ್ಸ್‌ಪೆಕ್ಟರ್ ಬೆಲ್ಟ್ ಕೈಗೆ ಬಂತು. ಎಂತೆಂಥವರನ್ನೇ ಬಾಯಿ ಬಿಡಿಸಿದ್ದೀನಿ, ಈ ಚೋಟುದ್ದ ಹುಡುಗನೇನು ಮಹಾ?

ಹುಡುಗ ನೋವಿನಿಂದ ತತ್ತರಿಸಿದ. ಚೀತ್ಕರಿಸಿದ, ನರಳಿದ. ಕೊನೆಗೂ ಆತನ ಬಾಯಿಯಿಂದ ಮಾತುಗಳು ಹೊರಟವು– ನನ್ನನ್ನು ಇಲ್ಲಿಗೆ ಕಳುಹಿಸಿದ್ದು....

'ಬೊಗಳು.. ಯಾರು ಕಳುಹಿಸಿದ್ದು..?'

'ಹಸಿವು ಸಾರ್... ಹಸಿವು ...'– ಹುಡುಗನ ಕಣ್ಣು ಕತ್ತಲಿಟ್ಟಿತು. ಹಾಗೆಯೇ ನೆಲಕ್ಕುರುಳಿದ.

*****

ಅಲ್ಲಿ ಊರ ಹೊರಗಿನ ಪುಟ್ಟ ಗುಡಿಸಲಿನಲ್ಲಿ ಹೊರಗೆ ಹೋದ ಮಗ ಇನ್ನೂ ಏಕೆ ಬಂದಿಲ್ಲವೆಂದು ಆಕೆ ಚಿಂತಾಕ್ರಾಂತಳಾಗಿದ್ದಳು. ಇನ್ನೂ 12ರ ಎಳೆಯ ಹುಡುಗ. ಕತ್ತಲಾದರೂ ಏಕೆ ಬಂದಿಲ್ಲ? ಆ ಪುಟ್ಟ ಶೆಡ್‌ನಲ್ಲಿ ಇದ್ದವರು ಮೂವರೇ. ಅಪ್ಪ ಇಳಿವಯಸ್ಸು ಮತ್ತು ಅನಾರೋಗ್ಯದಿಂದಾಗಿ ಹಾಸಿಗೆ ಹಿಡಿದಿದ್ದಾನೆ. ಪುಟ್ಟ ಮಗಳಿಗೆ ಇನ್ನೂ ಮೂರು ವರ್ಷ. ಕುಟುಂಬವನ್ನು ಸಾಕಲು ತಾನೇ ಕೂಲಿ ಮಾಡಬೇಕು. ಆದರೆ ಎರಡು ವಾರದ ಹಿಂದೆ ಕಟ್ಟಡದ ಮೇಲಿಂದ ಬಿದ್ದು ಕಾಲು ಉಳುಕಿದೆ. ನಡೆದಾಡಲೂ ಆಗುತ್ತಿಲ್ಲ. ನೋವೂ ಮಿತಿ ಮೀರಿದೆ. ಕೆಲಸಕ್ಕೆ ಹೋಗದೆ ಹೊಟ್ಟೆ ತುಂಬುವುದು ಹೇಗೆ? ಮಗನಿಗೇನೋ ಶಾಲೆಯಲ್ಲಿ ಮಧ್ಯಾಹ್ನದ ಊಟ ಸಿಗುತ್ತದೆ, ಆದರೆ ಉಳಿದವರಿಗೆ?

ಒಂದು ವಾರದಿಂದ ಮನೆಯಲ್ಲಿದ್ದ ಎಲ್ಲವೂ ಖಾಲಿಯಾಗಿದೆ. ಹಸಿವೆ ತಡೆಯಲಾಗದೆ ನರಳುತ್ತಿದ್ದರೆ, ಈ ಮಗ ಎಲ್ಲಿಂದಾದರೂ ಒಂದಿಷ್ಟು ಅನ್ನ ತರುತ್ತೇನೆಂದು ಹೋಗಿದ್ದಾನೆ. ಇನ್ನೂ ಏಕೆ ಬಂದಿಲ್ಲ. ಯಾವತ್ತೂ ಮನೆ ಬಿಟ್ಟು ಹೀಗೆ ರಾತ್ರಿ ಹೊತ್ತು ಹೋದವನಲ್ಲ. ಆಕೆ ನೋವಿನಿಂದ ಕಾಲು ಕುಂಟುತ್ತಾ ಅವುಡುಗಚ್ಚಿಗೊಂಡು ಶೆಡ್‌ನ ಬಾಗಿಲತ್ತ ನೋಡಿದಳು. ಕತ್ತಲೆ ಇನ್ನಷ್ಟು ಗಾಢವಾಗತೊಡಗಿತ್ತು. ■